**<u>ಸಾಕ್ಷಿಗೆ ದಿನಾಂಕ *30 -10-2025* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ *7* ನೇ ಪ್ರತಿವಾದಿಯ ಪರ ಶ್ರೀ ಎಮ್ ಎಸ್ ಪಿ ವಕೀಲರಿಂದಃ</u>**

ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಿಡಿ-37 ಃ ಸರ್ವೆ ನಂ. 56/2 ಇದರ ಪಹಣಿ ಪತ್ರಿಕೆ

ನಿಡಿ-38 ಃ ಸರ್ವೆ ನಂ. 39/2 ಇದರ ಪಹಣಿ ಪತ್ರಿಕೆ

ನಿಡಿ-39 ಃ ಸರ್ವೆ ನಂ. 35/2 ಇದರ ಪಹಣಿ ಪತ್ರಿಕೆ

ನಿಡಿ-40 ಃ ಸರ್ವೆ ನಂ. 35 /2 ಎ ಇದರ ಪಹಣಿ ಪತ್ರಿಕೆ

ನಿಡಿ-41 ಃ ಸರ್ವೆ ನಂ. 74 ಇದರ ಪಹಣಿ ಪತ್ರಿಕೆ

ನಿಡಿ-42 ಃ ಸರ್ವೆ ನಂ. 73/1+2+3+4/ಅ/1 ಇದರ ಪಹಣಿ ಪತ್ರಿಕೆ

ನಿಡಿ-43 ಃ ಸರ್ವೆ ನಂ. 73/1+2+3+4/ಅ/2 ಇದರ ಪಹಣಿ ಪತ್ರಿಕೆ

ದಾವೆಯನ್ನು ವಜಾಗೊಳಿಸಬೇಕೆಂದು ಕೋರುತ್ತೇನೆ.

**ಪಾಟೀ ಸವಾಲು ಃ ವಾದಿಯ ಪರ ಶ್ರೀ ಆರ್ ಕೆ ಬಿ ವಕೀಲರಿಂದ**

ನಾನು ಇಂದು ಮಾನ್ಯ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ವರಗೊಡದಿನ್ನಿ ಗ್ರಾಮದಿಂದ ಬಂದಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ನನ್ನ ತಂದೆ ತಾಯಿಗೆ 3 ಜನ ಗಂಡು ಮಕ್ಕಳು ಮತ್ತು ನಾನು ಒಬ್ಬಳೇ ಹೆಣ್ಣು ಮಗಳು. ಅವರೆಂದರೆ, ಯಮನಪ್ಪ, ಶಂಕ್ರಪ್ಪ ಮತ್ತು ಸಿದ್ರಾಮಪ್ಪ. ನನ್ನ ತಂದೆ ತೀರಿಕೊಳ್ಳುವ ಮೊದಲೇ ಯಮನಪ್ಪ ತೀರಿಕೊಂಡಿರುತ್ತಾನೆ ಎಂದರೆ ಸರಿ. ನನ್ನ ತಂದೆಯವರು ಜೀವಂತ ಇದ್ದಾಗ ಮನೆತನದ ಹಿರಿತನವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ತೀರಿಕೊಂಡ ನಂತರ ಸಿದ್ರಾಮ್ಪ ಮತ್ತು ಶಂಕ್ರಪ್ಪ ರವರು ಮನೆತನದ ಹಿರಿತನವನ್ನು ನೋಡಿಕೊಂಡು ಹೋಗುತ್ತಿದ್ದರು. ನನ್ನ ಅಣ್ಣನ ಹೆಂಡತಿ ನಿಂಬವ್ವ ಮತ್ತು ಅವರ ಮಗ ದ್ಯಾವಪ್ಪ ರವರು ಕೂಡಿ ಇದ್ದರು ಎಂದರೆ ಸರಿ. ಶಿವಶಂಕ್ರಪ್ಪ ತೀರಿಕೊಂಡ ನಂತರ ಮಲ್ಲಿಕಾರ್ಜುನ ಮತ್ತು ಬಸವರಾಜ ರವರು ಕೂಡಿಯೇ ಇದ್ದರು ಎಂದರೆ ಸರಿ. 5 ನೇ ಪ್ರತಿವಾದಿಯು ನನ್ನ ಮಗಳು. 45 ರಿಂದ 50 ವರ್ಷಗಳ ಹಿಂದೆ ನನ್ನ ಸಹೋದರ ಸಿದ್ರಾಮಪ್ಪ ರವರಿಗೆ 5 ನೇ ಪ್ರತಿವಾದಿಯಾದ ನನ್ನ ಮಗಳನ್ನು ಮದುವೆ ಮಾಡಿ ಕೊಟ್ಟಿರುತ್ತೇನೆ. ಸಿದ್ರಾಮಪ್ಪ ರವರಿಗೆ ನನ್ನ ಮಗಳನ್ನು 2 ನೇ ಹೆಂಡತಿಯಾಗಿ ಮದುವೆ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಖಾಯಂ

ತರೀಖಾಗಿ ವರಗೊಡದಿನ್ನಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ತುರಡಗಿ ಮತ್ತು ಕಟಗೂರಿನಲ್ಲಿ ಬರುವ ಜಮೀನುಗನ್ನು ನನ್ನ ಸಹೋದರ ಮತ್ತು ಅವರ ಮಕ್ಕಳು ಅವುಗಳ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿದಾರರು ನನ್ನ ಮಗಳು ಸಾಗುವಳಿ ಮಾಡುತ್ತಿದ್ದಾಳೆ ಎಂದು ಹೇಳುತ್ತಾರೆ. 1976 ರಲ್ಲಿ ನನ್ನ ತಂದೆ ತುರಡಗಿಯಲ್ಲಿ ತೀರಿಕೊಂಡ ನಂತರ, 1985 ರಲ್ಲಿ ನಾನು ನನ್ನ ಪಾಲಿನ ಹಕ್ಕನ್ನು ನನ್ನ ಸಹೋದರರಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಡ ನಂ. 1373 ರ ಪ್ರಕಾರ ನನ್ನ ತಂದೆ ತೀರಿಕೊಂಡ ನಂತರ ಶಂಕ್ರಪ್ಪ, ಸಿದ್ರಾಮಪ್ಪ ಮತ್ತು ದ್ಯಾವಪ್ಪ ರವರ ಹೆಸರುಗಳು ಮಾತ್ರ ಬಂದಿರುತ್ತವೆ ಎಂದರೆ ಸಾಕ್ಷಿದಾರರು ನಾನು ಯಾವುದೇ ಸಹಿ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. 1976 ರಲ್ಲಿ ನನ್ನ ತಂದೆ ತೀರಿಕೊಂಡ ನಂತರ ನನ್ನ ಸಹೋದರರು ವಾರಸಾ ಮಾಡಿಕೊಳ್ಳುವ ಸಂದರ್ಬದಲ್ಲಿ ಕಟಗೂರು ಗ್ರಾಮದ ಜಮೀನು ಸರ್ವೆ ನಂ. 56/2 ಕ್ಷೇತ್ರ 4 ಎಕರೆ 11 ಗುಂಟೆ ಇದನ್ನು ಖರೀದಿ ಹಿಡಿದು ನನ್ನ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ಸಹೋದರ ಖರೀದಿ ಮಾಡಿರುವುದಿಲ್ಲ ಮತ್ತು ನನ್ನ ಗಂಡ ಅದನ್ನು ಖರೀದಿ ಹಿಡಿದಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಗಂಡ ಶಿಕ್ಷಕ ನೌಕರಿಯನ್ನು ಮಾಡುತ್ತಿದ್ದರು. ಅವರು ತೀರಿಕೊಂಡಿರುತ್ತಾರೆ. ಅವರು ಯಾವಾಗ ನಿವೃತ್ತಿ ಅಗಿದ್ದರು ಎಂದು ಗೊತ್ತಿರುವುದಿಲ್ಲ. ನನಗೆ ಮತ್ತು ನನ್ನ ಗಂಡನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ಅವರೆಂದರೆ, ರಾಮಣ್ಣ, ಮಹಾಂತೇಶ ಮತ್ತು ಶಿವಗಂಗವ್ವ(5 ನೇ ಪ್ರತಿವಾದಿ). ನಾನು ಈ ದಿನ ಹಾಜರು ಪಡಿಸಿರುವ ಆಸ್ತಿಗಳು ನನ್ನ ಗಂಡನಿಗೆ ಸಂಬಂದಪಟ್ಟ ಆಸ್ತಿಗಳಾಗಿರುತ್ತವೆ. ನನ್ನ ಗಂಡ ತೀರಿಕೊಂಡ ನಂತರ ವಾರಸಾನಾತೆಯಿಂದ ನನ್ನ ಮತ್ತು ನನ್ನ ಮಕ್ಕಳ ಹೆಸರು ದಾಖಲಾಗಿರುತ್ತವೆ. ಶಿವಶಂಕ್ರಪ್ಪ ಮತ್ತು ಯಮನಪ್ಪ ತೀರಿಕೊಂಡ ನಂತರ ದಾವಾ ಆಸ್ತಿಗಳನ್ನು ಸಿದ್ರಾಮಪ್ಪ ರವರು ನೋಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ. ಇತ್ತೀಚೆಗೆ ಮನೆತನದಲ್ಲಿ ವ್ಯತ್ಯಾಸ ಬಂದ ಕಾರಣ ನಾನು 4 ಎಕರೆ 11 ಗುಂಟೆ ಕ್ಷೇತ್ರ ಇದು ನನ್ನ ತವರು ಮನೆ ಆಸ್ತಿ ಎಂದು ಗುರುಹಿರಿಯರ ಮುಂದೆ ಹೇಳುತ್ತಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಸಹೋದರ ಸಿದ್ರಾಮಪ್ಪ ರವರ ಕಡೆಯಿಂದ 10 ತೊಲೆ ಬಂಗಾರನ್ನು ತೆಗೆದುಕೊಂಡು 4 ಎಕರೆ 11 ಗುಂಟೆ ಕ್ಷೇತ್ರವನ್ನು ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು, 5 ಮತ್ತು 6 ನೇ ಪ್ರತಿವಾದಿಯರು ಒಟ್ಟಿಗೆ ಕೂಡಿ ಇರುತ್ತೇವೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನ್ನ ಸಹೋದರ ಸಿದ್ರಾಮಪ್ಪ ರವರ ಹಕ್ಕನ್ನು ಮೊಟಕುಗೊಳಿಸಬೇಕೆಂದು 5 ಮತ್ತು 6 ನೇ ಪ್ರತಿವಾದಿಯರು ತಮ್ಮ ಹೆಸರನ್ನು

ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳು ಮಾಡಿದ ಎಮ್ ಆರ್ ನಂಬರಗಳು ವಾದಿಯ ಹಕ್ಕಿಗೆ ಬಂದನಕಾರಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳಲ್ಲಿನ ಸಂಪೂರ್ಣ ಹಕ್ಕನ್ನು ಬಿಟ್ಟು ಕೊಟ್ಟಿದ್ದರಿಂದ ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಕಟಗೂರ ಗ್ರಾಮದ ಸರ್ವೆ ನಂ. 56/2 ಇದು ನನ್ನ ಕೈ ಬಿಟ್ಟು ಹೋಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಬಿ ಎನ್ ಎಮ್ ವಕೀಲರಿಂದ**

ನನ್ನ ತಂದೆಯ ಹೆಸರು ದ್ಯಾವಪ್ಪ ಅವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ನನ್ನ ಮದುವೆ ನನ್ನ ತಂದೆ ಇದ್ದಾಗ ಆಗಿರುತ್ತದೆ. ನನ್ನತಂದೆ ಇದ್ದಾಗ ನನ್ನನ್ನು ಅನುಕೂಲಸ್ತ ಮನೆಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಸಾಕಷ್ಟು ಬಂಗಾರವನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ವಾರಸಾ ಮಾಡಿಕೊಳ್ಳುವ ಸಮಯದಲ್ಲಿ ನನ್ನ ಸಹೋದರರು ನನಗೆ ಕಟಗೂರು ಗ್ರಾಮದ ಸರ್ವೆನಂ. 56/2 ನ್ನು ಖರೀದಿ ಹಿಡಿದು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಇದರ ಜೊತೆಗೆ ನನ್ನ ಸಹೋದರರು 10 ತೋಲೆ ಬಂಗಾರವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ನನ್ನ ಸಹೋದರರು ಬಂಗಾರ ಮತ್ತು ಜಮೀನನ್ನು ಕೊಟ್ಟಿದ್ದರು ಕೂಡ ಇಲ್ಲ ಎಂದುಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಂಗಾರ ಮತ್ತು ಜಮೀನನ್ನು ತೆಗೆದುಕೊಂಡಿದ್ದರಿಂದ ನಾನು ನನ್ನ ಹಕ್ಕನ್ನು ನನ್ನ ಸಹೋದರರಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಹೋದರನಾದ ಸಿದ್ರಾಮಪ್ಪ ರವರಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡಿರುತ್ತೇನೆ ಎಂದರೆ ಸರಿ. ನಾನು ನನ್ನ ಹಕ್ಕನ್ನು ಬಿಟ್ಟುಕೊಟ್ಟಿದ್ದರಿಂದ ದಾವಾ ಆಸ್ತಿಗಳಲ್ಲಿ ಯಾವುದೇ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು :** 1, 2 ಮತ್ತು 5 ನೇ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.